ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಸಂ.ಕರಾಸಾ:ಕೇಕ:ಸಂ:ವಾಣಿಜ್ಯ/ 2032/ 308/ 2018-19 ದಿನಾಂಕ: 21-04-2018

## ಸುತ್ತೋಲೆ ಸಂಖ್ಯೆ: 1429/2018

(ಸಂಚಾರ (ವಾಣಿಜ್ಯ) ಇಲಾಖೆಯಿಂದ ಹೊರಡಿಸಲ್ಪಟ್ಟಿದೆ)

**ವಿಷಯ:** ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಎ.ಟಿ.ಎಂ ಕೌಂಟರ್‌ಗಳ ಸ್ಥಾಪನೆಗಾಗಿ ನೀಡುತ್ತಿರುವ ದರಗಳ ಪರಿಷ್ಕರಣೆ ಕುರಿತು.

**ಉಲ್ಲೇಖ:** ಸಾ.ಸ್ಥಾ.ಆದೇಶ ಸಂಖ್ಯೆ:787/2017 ದಿನಾಂಕ 26.07.2017.

-*-

ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಎ.ಟಿ.ಎಂ. ಕೌಂಟರ್ ತೆರೆಯಲು ಬ್ಯಾಂಕ್‌ಗಳಿಗೆ/ ಬ್ಯಾಂಕ್‌ಗಳು ನೇಮಿಸುವ ಸೇವಾ ಪೂರೈಕೆದಾರರಿಗೆ (Service Providers appointed by Banks) ನೇರವಾಗಿ ಬಸ್ ನಿಲ್ದಾಣದಲ್ಲಿ ಎ.ಟಿ.ಎಂ. ಕೌಂಟರ್‌ನ ಅವಶ್ಯಕತೆ, ಕಟ್ಟಿದ ಮಳಿಗೆಯ ಲಭ್ಯತೆ ಅಥವಾ ಕಟ್ಟಿದ ಮಳಿಗೆಗಳು ಖಾಲಿ ಇಲ್ಲದಿದ್ದಲ್ಲಿ, ತೆರೆದ ಸ್ಥಳವನ್ನು ಒದಗಿಸಲಾಗುತ್ತಿದೆ.

ಸದರಿ ಎ.ಟಿ.ಎಂ ಕೌಂಟರ್ ಸಂಬಂಧ ನಿಗಮದ ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ-492 ಮತ್ತು ಅದರ ಪೂರಕ / ಸಂಬಂಧಿತ ತಿದ್ದುಪಡಿ ಆದೇಶಗಳು / ಸುತ್ತೋಲೆಗಳು ಹಾಗೂ ನಿರ್ದೇಶನ ಪತ್ರಗಳನ್ನು ಅನೂರ್ಜಿತಗೊಳಿಸಿ, ಹೊರಡಿಸಲಾಗಿರುವ ಸಾ.ಸ್ಥಾ.ಆದೇಶ ಸಂಖ್ಯೆ:787/2017 ದಿನಾಂಕ 26.07.2017 ಅಂಶ **XXIV(4)** ರಂತೆ ಎ.ಟಿ.ಎಂ. ಕೌಂಟರ್‌ಗಳಿಗೆ ನೇರವಾಗಿ (ಇ-ಟೆಂಡರ್ ಹೊರತುಪಡಿಸಿ) ಪರವಾನಗಿ ನೀಡುವಾಗ ದರಗಳನ್ನು ನಿಗದಿಪಡಿಸಿ ಹಂಚಿಕೆ ಮಾಡಲು ಉಲ್ಲೇಖಿಸಲಾಗಿತ್ತು. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 787/2017ರಲ್ಲಿ ನಿಗದಿಪಡಿಸಿರುವ ದರಗಳು ಹೆಚ್ಚಾಗಿರುವ ಸಂಬಂಧ ಬ್ಯಾಂಕ್‌ಗಳಿಂದ ಮನವಿಗಳನ್ನು ಸ್ವೀಕರಿಸಲಾಗಿರುತ್ತದೆ. ಸದರಿ ಮನವಿಗಳನ್ನು ಪುರಸ್ಕರಿಸಿ, ಸದರಿ ಎ.ಟಿ.ಎಂ ಕೌಂಟರ್‌ಗಳಿಗೆ ಸ್ಥಳಾವಕಾಶ ಒದಗಿಸುತ್ತಿರುವ ಸಂಬಂಧ ವಿಧಿಸುತ್ತಿರುವ ದರಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

| ಬಸ್ ನಿಲ್ದಾಣದ ಸ್ಥಳ | ಸಾ.ಸ್ಥಾ.ಆದೇಶ:787 ರಂತೆ ದರ ಪ್ರತಿ ಚದರ ಅಡಿಗೆ | ಪರಿಷ್ಕೃತ ದರ ಪ್ರತಿ ಚದರಡಿಗೆ |
|---|---|---|
| ಬೆಂಗಳೂರು | ರೂ.250/- | ರೂ.200/- |
| ಮೈಸೂರು ನಗರ | ರೂ.250/- | ರೂ.175/- |
| ಜಿಲ್ಲಾ ಕೇಂದ್ರಗಳು | ರೂ.200/- | ರೂ.150/- |
| ತಾಲ್ಲೂಕು ಕೇಂದ್ರಗಳು | ರೂ.150/- | ರೂ.100/- |
| ಹೋಬಳಿ / ಇತರೆ ಸ್ಥಳಗಳು | ರೂ.100/- | ರೂ.75/- |

ಇನ್ನುಳಿದಂತೆ ಜಾರಿಯಲ್ಲಿರುವ ಸಾಮಾನ್ಯ ಸ್ಥಾಯಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಸದರಿ ಸಾಮಾನ್ಯ ಸ್ಥಾಯಿ ಆದೇಶವು ಈ ಕೂಡಲೇ ಜಾರಿಗೆ ಬರುತ್ತದೆ. ಸಾಮಾನ್ಯ ಸ್ಥಾಯಿ ಆದೇಶ ಜಾರಿಗೊಳಿಸಿರುವ ಬಗ್ಗೆ ಸ್ವೀಕೃತಿ ಮತ್ತು ಅನುಸರಣಾ ವರದಿ ನೀಡುವುದು.

**ವ್ಯವಸ್ಥಾಪಕ ನಿರ್ದೇಶಕರು**

**ಪ್ರತಿಯನ್ನು,**

1) ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2) ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ.ನಿಗಮ, ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3) ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು, ಕ.ರಾ.ರ.ಸಾ.ನಿಗಮರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
5) ಅಧ್ಯಕ್ಷರು / ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.
6) ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಭ ಮತ್ತು ಜಾ) / ನಿರ್ದೇಶಕರು (ಸಿ ಮತ್ತು ಪ) ರವರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.